**<u>ಸಾಕ್ಷಿಯನ್ನು ದಿಃ 01.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎನ್ ಎನ್. ವಕೀಲರಿಂದಃ-</u>**

ನಾನು 8 ನೇ ತರಗತಿ ವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ನ್ಯಾಯಾಲಯದ ಮುಂದೆ ಆರ್.ಡಿ ವಂಶವೃಕ್ಷ ಹಾಜರು ಪಡಿಸಿಲ್ಲ ಎಂದರೆ ವಂಶವೃಕ್ಷ ಮಾಡಿಸಿಕೊಟ್ಟಿದ್ದೇನೆ ಎನ್ನುತ್ತಾರೆ. ಸಾಕ್ಷಿ ಪುನಃ ಆರ್.ಡಿ ವಂಶವೃಕ್ಷ ಹಾಜರು ಪಡಿಸಿಲ್ಲ ಎನ್ನುತ್ತಾರೆ. ನಮ್ಮ ತಂದೆಗೆ ಕ್ಯಾತೆ ನಂಜಪ್ಪ ಎಂದು ಕರೆಯುತ್ತಿದ್ದರು. ನಮ್ಮ ತಂದೆಯ ಹೆಸರು ನಂಜಪ್ಪ ಅಲಿಯಾಸ್ ಕ್ಯಾತೆ ನಂಜಪ್ಪ.

ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು. ಪಿತ್ರಾರ್ಜಿತ ಸ್ವತ್ತುಗಳು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಕೊಟ್ಟಿರುತ್ತೇನೆ. ಏನು ದಾಖಲೆ ಕೊಟ್ಟಿದ್ದೇವೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಅಲ್ಲದೆ ಮನೆ ಮತ್ತು ಗದ್ದೆ ಇರುತ್ತದೆ. ಸದರಿ ಮನೆ ಮತ್ತು ಗದ್ದೆಯನ್ನು ಈ ಕೇಸ್ ನಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ, ಸೇರಿದ್ದೇವೆ. ದಾವೆಯಲ್ಲಿ ಸರ್ವೆ 6/1 ರಲ್ಲಿ 3 ಎಕರೆ 38 1/4 ಕಾಲು ಗುಂಟೆ ಜಮೀನು ಹೊರತು ಪಡಿಸಿ ಬೇರೆ ಯಾವುದೆ ಸ್ವತ್ತುಗಳನ್ನು ಸೇರಿಸಿಲ್ಲ ಎಂದರೆ ದಾಖಲೆ ಇರಲಿಲ್ಲ ಈಗ ಸೇರಿಸುತ್ತೇವೆ ಎಂದು ನುಡಿಯುತ್ತಾರೆ. ಸದರಿ ಗದ್ದೆಯ ಸರ್ವೆ ನಂ, ಚಕ್ಕಬಂದಿ ಹೇಳಲು ಆಗುವುದಿಲ್ಲ, ಅದು ಮುಕ್ಕಾಲು ಎಕರೆ ಇರುತ್ತದೆ.

ನಮ್ಮ ತಾತನ ಹೆಸರು ನಂಜಪ್ಪ, ತಾತನ ತಂದೆ ಹೆಸರು ನನಗೆ ಗೊತ್ತಿಲ್ಲ. ಮನೆ ಖಾತೆ ನಂಬರ್ ಮತ್ತು ಜಂಜರ್ ನಂಬರ್ ಮತ್ತು ಅದರ ವಿಸ್ತೀರ್ಣ ಹೇಳಲು ಆಗುವುದಿಲ್ಲ. ಅದೆ ರೀತಿ 1 ನೇ ವಾದಿ ದೇವಿರಮ್ಮ ಬನ್ನಿಕುಪ್ಪೆ ಗ್ರಾಮದಲ್ಲಿ ಆರ್.ಸಿ.ಸಿ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಅದು ಕೂಡ ಈ ಕೇಸ್ ನಲ್ಲಿ ಸೇರಿಸಿಲ್ಲ ಎಂದರೆ ಅದು ಅವರ ಸ್ವಂತದ ಮನೆ ಎನ್ನುತ್ತಾರೆ. ಅದು ಕೂಡ ತಂದೆ

ರವರ ಜಾಗದಲ್ಲಿ ಕಟ್ಟಿರುವಂತಹದ್ದು, ಎಂದರೆ ವಾದಿ ಹಣ ಕೊಟ್ಟು ಪ್ರತ್ಯೇಕವಾಗಿ ಖರೀದಿ ಮಾಡಿದ್ದರು ಎನ್ನುತ್ತಾರೆ. ನನ್ನ ಅಣ್ಣ ಮತ್ತು ತಂದೆಯೆ ಸದರಿ ಮನೆಯನ್ನು 1 ನೇ ವಾದಿಗೆ ಕಟ್ಟಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ಆದರೂ ಅಣ್ಣ ಮತ್ತು ತಂದೆಯೆ ಸದರಿ ಮನೆಯನ್ನು ಕಟ್ಟಿಸಿಕೊಟ್ಟಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಾಗವನ್ನು 1 ನೇ ವಾದಿ ಯಾರಿಂದ ಖರೀದಿ ಮಾಡಿದ್ದರು ಎಂದರೆ ಸಾಕ್ಷಿ ನಮ್ಮ ತಂದೆ ಅದನ್ನು ಮಾರಾಟ ಮಾಡಲು ಹೊರಟ್ಟಿದ್ದು, 1 ನೇ ವಾದಿ ಹಣ ಕೊಟ್ಟು ಖರೀದಿ ಮಾಡಿದ್ದರು ಎನ್ನುತ್ತಾರೆ. 1 ನೇ ಪ್ರತಿವವಾದಿಗೆ ಗೊತ್ತಾಗದ ಹಾಗೆ ವಾದಿ ಕರೆದುಕೊಂಡು ಹೋಗಿ ಹಾಗೆ ಖರೀದಿ ಪತ್ರ ಮಾಡಿಸಿಕೊಂಡಿರುವುದು ಎಂದರೆ ಸರಿಯಲ್ಲ. ಬ್ಯಾಂಕ್ ನಲ್ಲಿ ಸಾಲ ಕೊಡಿಸುತ್ತೇನೆ ಎಂದು ಕರೆದುಕೊಂಡು ಹಾಗೆ ಮೋಸದಿಂದ ಸಹಿ ಮಾಡಿಸಿಕೊಂಡಿರುವುದು ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ನನ್ನ ತಂದೆ, ತಾಯಿ, ನನ್ನ ಸಹೋದರರು ಇಬ್ಬರು ಸಹಿ ಹಾಕಿತ್ತಾರೆ, ಮತ್ತು ನಾವು ಸಹೋದರಿಯರು ಹಾಕಿರುವುದಿಲ್ಲ ಎನ್ನುತ್ತಾರೆ.

ಅದೆ ರೀತಿ 2 ನೇ ವಾದಿ ಕುಮಾರಿ ನಮ್ಮ ತಂದೆ ಜಾಗದಲ್ಲಿ ಮಂಗಳೂರು ಹಂಚಿನ ಮನೆ ಕಟ್ಟಿಸಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ 1 ನೇ ವಾದಿಗೆ ಕೊಟ್ಟಂತಹ ಜಾಗದಲ್ಲಿ ಅವರ ಮನೆ ಕಟ್ಟಿಸಿಕೊಳ್ಳಲು ಕೊಟ್ಟಿದ್ದಾರೆ ಎನ್ನುತ್ತಾರೆ. ಆ ಸಂಬಂಧ ದಾಖಲೆ ಹಾಜರುಪಡಿಸಿಲ್ಲ. ಸದರಿ ಮನೆಯನ್ನು ಈ ದಾವೆ ಸೇರಿಸಿಲ್ಲ. ವಾದಿಗಳಾದ ನಮ್ಮಗಳ ಮದುವೆ ಮಾಡುವ ಸಮಯದಲ್ಲಿ ನಮ್ಮ ತಂದೆ 1 ಎಕರೆ ಜಮೀನು ಮಾರಾಟ ಮಾಡಿದ್ದರು ಎಂದರೆ ನಮ್ಮ ಮದುವೆಗೆಂದು ಮಾರಾಟ ಮಾಡಿರಲಿಲ್ಲ, ಜೀವನ ಮಾಡುವುದು ಕಷ್ಟ ಎಂದು ಹಾಗೆ ಮಾರಾಟ ಮಾಡಿದ್ದರು ಎನ್ನುತ್ತಾರೆ. ಹಾಗೆ ಜಮೀನು ಮಾರಾಟ ಮಾಡುವಾಗ ನಮ್ಮಗಳ ಮದುವೆ ಆಗಿತ್ತು. ಸದರಿ ಜಮೀನನ್ನು ನಮ್ಮ ಊರಿನವರಿಗೆ ಮಾರಾಟ ಮಾಡಿರುತ್ತಾರೆ, ಆದರೆ ಅವರ ಹೆಸರು ಗೊತ್ತಿಲ್ಲ. ಅದಕ್ಕೆ ನಾವು ಸಹಿ ಮಾಡಿಲ್ಲ. ಸದರಿ 1 ಎಕರೆ ಜಮೀನು ಹಾಗೂ ಖರೀದಿ ಮಾಡಿದವರನ್ನು ಈ ಕೇಸ್ ನಲ್ಲಿ ಸೇರಿಸಿಲ್ಲ.

1 ನೇ ವಾದಿ ಮದುವೆ ಮಾಡುವಾಗ 1 ಎಕರೆ ಜಮೀನನ್ನು ಮಾರಾಟ ಮಾಡಿದ್ದರು ಎಂದು, 2 ಮತ್ತು 3 ನೇ ವಾದಿ ನನ್ನನ್ನು ಮದುವೆ ಮಾಡುವ ಕಾಲಕ್ಕೆ ಊರಿನವರ ಹತ್ತಿರ ಸಾಲ ಮಾಡಿದ್ದರು ಎಂದರೆ ಸರಿಯಲ್ಲ. ಹಾಗೆ ಜಮೀನು ಮಾರಾಟ ಮಾಡಿ ಹಾಗೆ ಸಾಲ ಮಾಡಿ ಮದುವೆ ಮಾಡಿದ್ದರು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಂದೆ ಆರೋಗ್ಯವಾಗಿದ್ದಾಗಲೆ ತೀರಿಕೊಂಡರು. ನಮ್ಮ ತಂದೆ ಹುಷಾರಿಲ್ಲದೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ತೀರಿಕೊಂಡಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂರದೆ ಸರಿಯಲ್ಲ. ಈಗಲೂ ಕೂಡ ಇಬ್ಬರೂ ಅಣ್ಣಂದಿರು ಅಂದರೆ ಪ್ರತಿವಾದಿಗಳು ಇಬ್ಬರೂ ಸಾಲಕ್ಕೆ ಬಡ್ಡಿ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಅವರು ವೈಯಕ್ತಿಕ ಸಾಲ ಮಾಡಿಕೊಂಡಿದ್ದರು ಎನ್ನುತ್ತಾರೆ. ಪ್ರತಿವಾದಿಗಳು ಯಾವುದೆ ವೈಯಕ್ತಿಕ ಸಾಲ ಮಾಡಿಕೊಂಡಿಲ್ಲ, ನಮ್ಮ ಮದುವೆ ಮಾಡಿದ ಸಾಲ ತೀರಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ಚಿಕ್ಕಪ್ಪನ ನಡುವೆ ಪಾಲು ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರವನ್ನು ನ್ಯಾಯಲಯಕ್ಕೆ ಹಾಜರುಪಡಿಸಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.